ಶ್ರೀ ಎಸ್. ಶಿವಾನಂದಪಾಟೀಲ್: ನಮಗೆ ಒಂದು ವಿಚಾರವನ್ನು ಹೇಳಲಿ. ಸಿ.ಇ.ಟಿ.ಯಲ್ಲಿ ಪಾಸಾಗಿರತಕ್ಕ ಮಕ್ಕಳು ಕಾಮೇಡ್-ಕೆ ಯಲ್ಲಿ ಹೇಗೆ ಫೇಲಾಗುತ್ತಾರೆ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಉಪಾಧ್ಯಕ್ಷರೆ, ನಾನು ತರುತ್ತಿರತಕ್ಕ ಈ ವಿಧೇಯಕಕ್ಕೂ ಸಿ.ಇ.ಟಿ.ಗೂ ಏನು ಸಂಬಂಧ ಇಲ್ಲ. ನಾನು ಎಲ್ಲಾ ವಿಷಯಗಳನ್ನು ಹೇಳಿದ್ದೇನೆಂದು ಅಂದುಕೊಂಡಿದ್ದೇನೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) 2006, ಅಂಗೀಕೃತವಾಗಬೇಕೆಂದು ವಿನಂತಿಸುತ್ತೇನೆ.

ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): ಸಾಕಷ್ಟು ಜನರು ಇದರಲ್ಲಿ ಭಾಗವಹಿಸಿದ್ದಾರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇದನ್ನು ಪ್ರಾರಂಭ ಮಾಡಿದ್ದಾರೆ. ಎಲ್ಲರೂ ಕೂಡ ಭಾಗವಹಿಸಿ ಹೇಳಿದ್ದಾರೆ. ಇದು ಬಹಳ ಮಹತ್ವವಾದ ಮಸೂದೆ. ಇದರ ಬಗ್ಗೆ ಸ್ಪಷ್ಟೀಕರಣ ಕೊಟ್ಟಿಲ್ಲ. ಕನ್‌ವಿನ್ಸ್ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ಈ ಬಿಲ್ಲನ್ನು ತಯಾರು ಮಾಡಿದವರೇ ತಾವು. ನೀವು ಇದನ್ನು ತಯಾರು ಮಾಡಿದಾಗ ಅಮೃತವಾಗಿತ್ತು. ನಿಮ್ಮ ಕೈಯಲ್ಲಿ ಅಮೃತವಾಗಿದೆ. ಆದರೆ ಈಗ ವಿಷವಾಗಿದೆ ಅಲ್ಲವೇ? ನೀವೇ ತಂದಿರುವಂಥ ಬಿಲ್ಲನ್ನು ತಂದಾಗ. ನೀವು ತಂದಾಗ ಅದು ಅಮೃತ, ಈಗ ಅದನ್ನು ನಾವು ಮೂವ್ ಮಾಡಿದರೆ ವಿಷ.

ಶ್ರೀ ಎನ್.ಧರ್ಮಸಿಂಗ್: ಹಾಗಲ್ಲ, ಆ ಕಾಲದಲ್ಲಿ ಆಗಿತ್ತು. ಇನ್ನೂ ಆಗತಕ್ಕದ್ದು ಇತ್ತು. ಪರಿಸ್ಥಿತಿ ಏನು ಅದರ ಬಗ್ಗೆ ಈವತ್ತು ಸದನದಲ್ಲಿ ಈ ಒಂದು ಮಸೂದೆ ಮಂಡಿಸಿದ ಮೇಲೆ ಇದರ ಹಿನ್ನಲೆ ಸಾಕಷ್ಟು ವಿಚಾರಗಳನ್ನು ಬೆಳಕು ಚೆಲ್ಲಿದ್ದಾರೆ. ಅದಕ್ಕೆ ತಾವು ಏನು ಸ್ಪಷ್ಟೀಕರಣ ನೀಡಿಲ್ಲ. ಆ ರೀತಿ ಸ್ಪಷ್ಟೀಕರಣ ಮಾಡಲಾರದೆ ಈವತ್ತಿನ ದಿವಸ ಬಹುಮತ ಇದೆಯೆಂದು ತಿಳಿದು ತಾವು ಇದರ ಬಗ್ಗೆ ಮತಕ್ಕೆ ಹಾಕಿದರೆ ನಾವು ಒಪ್ಪುವುದಿಲ್ಲ.

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, 2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದನ್ನು ಪ್ರತಿಭಟನೆ ಮಾಡಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಜೆ.ಡಿ.ಯು ಪಕ್ಷದ ಸದಸ್ಯರಾದ ಮಾನ್ಯ ಜೆ.ಸಿ. ಮಾಧುಸ್ವಾಮಿಯವರನ್ನು ಹೊರತುಪಡಿಸಿ ಉಳಿದ ವಿರೋಧ ಪಕ್ಷಗಳ ಎಲ್ಲಾ ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು: ಏನೆಂದರೆ "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಪ್ರಸ್ತಾವ ಏನೆಂದರೆ:–

ಉಪಾಧ್ಯಕ್ಷರು: "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "2006ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

(ಅನುಬಂಧ–2)

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಉಪಾಧ್ಯಕ್ಷರು: ಈಗ ಸದನವನ್ನು ನಾಳೆ ಬೆಳಿಗ್ಗೆ 10–00ಗಂಟೆವರೆಗೆ ಮುಂದೂಡುತ್ತಿದ್ದೇನೆ.